ದಿಃ 22-04-2016 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಎದುರುದಾರರ ಪರ ವಕೀಲರಾದ ಶ್ರೀ ಬಿ.ಎಚ್. ಇವರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ. ಅಂತಿಮ ಡಿಕ್ರಿಯ ದೃಢೀಕೃತ ನಕಲನ್ನು ನಿ.ಆರ್-1, ತಾಲೂಕು ಸರ್ವೆಯರ್ ಇವರು ಮಾಡಿದ ಮಹಜರ್ ನಕಲನ್ನು ಹಾಜರುಪಡಿಸಿದ್ದು ನಿ.ಆರ್-2, ಸರ್ವೆಯರ್ ಇವರು ತಯಾರಿಸಿದ ನಕ್ಷೆಯ ನಕಲನ್ನು ನಿ.ಆರ್-3, ಎರಡು ಮ್ಯೂಟೇಶನ್ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಆರ್-4 ಮತ್ತು ನಿ.ಆರ್-5, ದಿಃ 29.06.2005 ರಂದು ಅನ್ವರ್ ಎಂಬ ವ್ಯಕ್ತಿ ತಹಶೀಲ್ದಾರ್ ಇವರಿಗೆ ಕೊಟ್ಟ ಅರ್ಜಿಯ ದೃಢೀಕೃತ ನಕಲನ್ನು ನಿ.ಆರ್-6, ಪಾಲು ವಿಭಾಗದ ತಃಖ್ತೆಯ ದೃಢೀಕೃತ ನಕಲನ್ನು ನಿ.ಆರ್-7, ದಾವಾ ಮನೆಗೆ ಸಂಬಂಧಪಟ್ಟಂತೆ ವಿಭಾಗ ಮಾಡಿ ತಾಲೂಕು ಸರ್ವೆಯರ್ ಇವರು ತಯಾರಿಸಿದ ನಕ್ಷೆಯ ನಕಲನ್ನು ನಿ.ಆರ್-8, ಹರಿಹರ ತಾಲೂಕ ಸರ್ವೆಯರು ಇವರು ಖಾಲಿ ನಿವೇಶನಕ್ಕೆ ಸಂಬಂಧಪಟ್ಟಂತೆ ನಕ್ಷೆ ತಯಾರಿಸಿದ್ದು ಅದರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-9, ಅಸಲು ದಾವಾ ನಂಃ 77/1995 ಇದರಲ್ಲಿ ಆದ ಪ್ರಾಥಮಿಕ ಡಿಕ್ರಿಯ ದೃಢೀಕೃತ ನಕಲನ್ನು ನಿ.ಆರ್-10 ಎಂದು ಗುರುತಿಸಲಾಯಿತು. ಎಫ್.ಡಿ.ಪಿ. ನಂಃ 18/2002 ಇದರಲ್ಲಿ ಆದ ಆದೇಶದ ದೃಢೀಕೃತ ನಕಲನ್ನು ನಿ.ಆರ್-11, 18 ಗೇಣಿ ಮತ್ತು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಆರ್-12 ರಿಂದ ನಿ.ಆರ್-29, ಐದು ಡಿಜಿಟಲ್ ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಆರ್-30 ರಿಂದ ನಿ.ಆರ್-34 ಮತ್ತು ಭಾವಚಿತ್ರಗಳಿಗೆ ಸಂಬಂಧಪಟ್ಟಂತೆ ಸಿ.ಡಿ. ಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-35, ಅಸಲು ದಾವಾ ನಂಃ 117/2012 ಇದರಲ್ಲಿನ ರೋಜನಾಮೆಯ ನಕಲನ್ನು ನಿ.ಆರ್-36, ಓ.ಎಸ್. ನಂಃ 117/2012 ಇದರ ವಾದ ಪತ್ರದ ದೃಢೀಕೃತ ನಕಲನ್ನು ನಿ.ಆರ್-37, ಸದರಿ ದಾವೆಯಲ್ಲಿ ಹಾಕಲ್ಪಟ್ಟ ಪ್ರತಿವಾದ

ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿ.ಆರ್-38, ಆ ದಾವೆಯಲ್ಲಿ ರೂಪಿಸಿದ ವಿವಾದಂಶಗಳ ದೃಢೀಕೃತ ನಕಲನ್ನು ನಿ.ಆರ್-39 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.